ನಮ್ಮದೇ ಸ್ವಲ್ಪ ಮೇಲುಗೈಯಾಗುತ್ತಿತ್ತು. ಬೇರೆ ಯಾರೂ ಮಧ್ಯ ಪ್ರವೇಶಿಸದೆ ಇರುತ್ತಿದ್ದರೆ ಲಂಕಾ ಇಬ್ಭಾಗವಾಗಿ, ಉತ್ತರದ ಭಾಗ ತಮಿಳು ಈಳಂ ಆಗಿ ಬಿಡುತ್ತಿತ್ತು."

"ನಾನು ಇಲ್ಲಿಗೆ ಬಂದು ಕನ್ನಡ ಕಲ್ತೆ. ನೀವು ನನ್ನೊಟ್ಟಿಗೆ ಸೇರಿ ತಮಿಳು ಕಲಿತು ಬಿಡಿ. ತಮಿಳು ಭಾಷೆಗೆ ಸಂಗಂ ಕಾಲದ ಇತಿಹಾಸವಿದೆಯಂತೆ. ಬೇರೆ ಭಾಷೆಗಳಿಂದ ಏನನ್ನೂ ಎರವಲು ಪಡೆಯದೆ ಬೆಳೆದ ಭಾಷೆ ಅದು. ನಿಮಗೆ ಗೊತ್ತಾ? ವಿಶ್ವದ ಹದಿನಾಲ್ಕು ದೇಶಗಳು ತಮಿಳನ್ನು ಎರಡನೇ ಭಾಷೆಯಾಗಿ ಅಂಗೀಕರಿಸಿವೆ. ನಮ್ಮವರು ವಿಶ್ವದಾದ್ಯಂತ ಹಬ್ಬಿದ್ದಾರೆ." ಅಜ್ಜನ ಮುಖದಲ್ಲಿ ಹೆಮ್ಮೆಯ ಕಳೆ.

"ಒಪ್ಪಿಕೊಂಡೆ ಅಜ್ಜ. ನಿಮ್ಮ ಕತೆ ಕೇಳಿದ ಮೇಲೆ ನಾನು ತಮಿಳು ಕಲಿಯುತ್ತೇನೆ, ಆಂಡವನೇ" ಎಂದು ಅಜ್ಜನನ್ನು ನಗಿಸಿದೆ. ಅಜ್ಜ ಖುಷಿಯಿಂದ ಮುಂದುವರಿಸಿದರು.

"ಲಂಕಾದಲ್ಲಿ ತಮಿಳರ ಸಂಖ್ಯೆ ಹೆಚ್ಚಾದರೂ ಲಂಕನ್ನರೇ ಬಹುಮತೀಯರಾಗಿದ್ದರು. ಆದುದರಿಂದ ಪಾರ್ಲಿಮೆಂಟಿನಲ್ಲಿ ಲಂಕನ್ನರದೇ ಆಧಿಪತ್ಯವಾಗಿ ಬಿಡುತ್ತಿತ್ತು. ದೇಶದ ಅಧ್ಯಕ್ಷ ಮತ್ತು ಪ್ರಧಾನಿಯಾಗಿ ಲಂಕನ್ನರೇ ಆರಿಸಲ್ಪಡುತ್ತಿದ್ದರು. ಆಯಕಟ್ಟಿನ ಜಾಗದಲ್ಲೆಲ್ಲಾ ಅವರೇ ತುಂಬಿರುತ್ತಿದ್ದರು. ನಾವು ತಮಿಳರು ಎರಡನೇ ದರ್ಜೆ ನಾಗರಿಕರಂತೆ ಬಾಳಬೇಕಾಗಿತ್ತು. ಬಹುಮತೀಯರ ದಬ್ಬಾಳಿಕೆ ವಿರೋಧಿಸಿ ನಾವು ಕಾನೂನನ್ನು ಕೈಗೆತ್ತಿಕೊಂಡೆವು. ಅನೇಕ ಶಸ್ತ್ರಾಸ್ತ್ರ ಸಂಘರ್ಷಗಳಾಗಿ ರಕ್ತದ ಕೋಡಿ ಹರಿಯಿತು. ಆಗ ನಡೆಯಿತು ಶಾಸ್ತ್ರಿ ಸಿರಿಮಾವೋ ಒಪ್ಪಂದ."

ನಾನು ಆ ಒಪ್ಪಂದದ ಬಗ್ಗೆ ಕೇಳಿದ್ದೆ. 1965ರಲ್ಲಿ ಆಗಿನ ಪ್ರಧಾನಿ ಲಾಲ ಬಹದ್ದೂರ್ ಶಾಸ್ತ್ರಿಗಳು ಲಂಕಾದ ಆಗಿನ ಅಧ್ಯಕ್ಷೆ ಸಿರಿಮಾವೋ ಭಂಡಾರನಾಯಿಕೆ ಜೊತೆ ಮಾಡಿಕೊಂಡ ಒಪ್ಪಂದ ಅದು. ಅದರ ಪ್ರಕಾರ ಲಂಕಾದಿಂದ ಏಳೂವರೆ ಲಕ್ಷ ತಮಿಳರು ಭಾರತಕ್ಕೆ ಬರಬೇಕಾಯಿತು. ಅವರು ಭಾರತದ ಉದ್ದಗಲಕ್ಕೆ ಹರಡಿಕೊಂಡರು.

"ನನಗೆ ಭಾರತದಲ್ಲಿ ಜೀವನ ಕಟ್ಟಿಕೊಳ್ಳಬೇಕು ಎಂಬ ತುಡಿತ ಇತ್ತು. ಯಾವತ್ತು ಲಂಕನ್ನರ ಗುಂಡಿಗೆ ಬಲಿಯಾಗಿ ಬಿಡುತ್ತೇನೋ ಎಂಬ ಆತಂಕವೂ ಇತ್ತು. ಆದರೆ, ನನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು ಲಂಕಾ ಬಿಟ್ಟು ಹೊರಡಲಿಲ್ಲ. 'ನಾವು ಇದ್ದರೂ ಇಲ್ಲೆ, ಸತ್ತರೂ ಇಲ್ಲೆ' – ಎಂದು ಬಿಟ್ಟರು. ನನ್ನ ಹುಟ್ಟೂರು ತಮಿಳುನಾಡಿನ ತಿರುಚಿನಾಪಳ್ಳಿ. ಅಲ್ಲಿ ನನ್ನ ಬಂಧು ಬಾಂಧವರು ನನ್ನನ್ನು ಸ್ವಾಗತಿಸಬಹುದೆಂಬ ಆಸೆಯಿತ್ತು. ನಾನು ಬಯಸಿದ ಊರು ನನಗೆ ಸಿಗಲಿಲ್ಲ. ನಾನು ಈ ಊರಿನಲ್ಲಿ ರಬ್ಬರ್ ಪ್ಲಾಂಟೇಶನ್ ಕಾರ್ಮಿಕನಾಗಿ ದುಡಿಯಬೇಕಾಯಿತು. ಬೆಳಗ್ಗೆ ಮೂರುವರೆಗೆ ಎದ್ದು ನನ್ನ ಕೆಲಸ ಆರಂಭವಾಗುತ್ತಿತ್ತು. ದಿನವಿಡೀ ದುಡಿತ. ಅದರಲ್ಲೇ ಹಣ್ಣಾಗಿ ಹೋದೆ. ಈಗಲೂ ಅದೇ ದುಡಿತ. ಇಲ್ಲಿನ ವ್ಯವಸ್ಥೆ ನೋಡಿದರೆ ಲಂಕಾನೇ ಚೆನ್ನಿತ್ತು ಎಂದು ನನಗನಿಸುತ್ತದೆ."

"ಮತ್ತೆ ನೀವು ಲಂಕಾಕ್ಕೆ ಹೋದ್ರಾ? ನಿಮ್ಮ ಹೆಂಡತಿ ಮಕ್ಕಳು ಹೇಗಿದ್ದಾರೆಂದು ಗೊತ್ತಾ?"

ತಮಿಳಜ್ಜ ಆಕಾಶದತ್ತ ನೋಡಿ ಕೈಮುಗಿದರು.

"ಯಾಕಜ್ಜ? ಏನಾಯಿತು?"

"ಏನು ಹೇಳುವುದು ಸ್ವಾಮಿ? ಎಲ್ಲದಕ್ಕೂ ನಮ್ಮ ಹಣೆಬರಹ ಸರಿ ಇರಬೇಕು. ನಾನು ಚೆನ್ನೈ ಬಂದರಿನಲ್ಲಿ ನಮ್ಮ ವಿವರ ದಾಖಲು ಮಾಡುವಾಗ ಸ್ವಲ್ಪ ಸಮಯ ಮಾತ್ರ ಭಾರತದಲ್ಲಿ ಇರುವುದಾಗಿಯೂ, ಆಮೇಲೆ ಲಂಕಾಕ್ಕೆ ಹೋಗಿ ನನ್ನ ಕುಟುಂಬವನ್ನು ಸೇರಿಕೊಳ್ಳುವುದಾಗಿಯೂ ಹೇಳಿಬಿಟ್ಟಿದ್ದೆ. ವಲಸೆ ಅಧಿಕಾರಿಗಳು ಅದೇನು ಮಾಡಿದರೋ? ಉಳಿದ ತಮಿಳರಿಗೆ ಸಿಕ್ಕ ಯಾವ ಸವಲತ್ತುಗಳೂ ನನಗೆ ಸಿಗಲಿಲ್ಲ. ಆದರೂ ಈ ಪ್ಲಾಂಟೇಷನ್ನಿನಲ್ಲಿ ಕೆಲಸ ಸಿಕ್ಕಿತು. ಪುಟ್ಟದೊಂದು ಕ್ವಾರ್ಟರ್ಸ್‌ನ ಒಂದು ಕೋಣೆಯೂ ಸಿಕ್ಕಿತು. ಆದರೆ, ನನ್ನನ್ನು ಅತೃಪ್ತಿ ಕಾಡಿತು. ಹಾಗೂ ಹೀಗೂ ಸ್ವಲ್ಪ ಕಾಲ ದುಡಿದು ತಿರುಚಿನಾಪಳ್ಳಿಗೆ ಹೋದೆ. ನನ್ನ ಹಿರಿಯರು ಯಾರೂ ಬದುಕುಳಿದಿರಲಿಲ್ಲ.